ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೬**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಾರನೇ ಅಧಿವೇಶನ

**ಮಂಗಳವಾರ, ದಿನಾಂಕ: ೧೯ನೇ ಆಗಸ್ಟ್, ೨೦೨೫**

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಕೊಪ್ಪಳ ಜಿಲ್ಲೆಯಲ್ಲಿ ೨೦೨೩–೨೪ನೇ ಸಾಲಿನಿಂದ ಇಲ್ಲಿಯವರೆಗಿನ ಅಕ್ರಮ ಮರಳು ಸಾಗಾಣಿಕೆ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೬ (೯೦೭) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಅಕ್ರಮ ಮರಳು ಸಾಗಾಣಿಕೆ ಪ್ರಕರಣಗಳು ವರದಿಯಾಗಿವೆ ; ಅವುಗಳಲ್ಲಿ ಎಷ್ಟು ಜನರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ ; (ವಿವರಗಳನ್ನು ಒದಗಿಸುವುದು)

(ಆ) ಅಕ್ರಮ ಮರಳು ಸಾಗಾಣಿಕೆಯಲ್ಲಿ ಆರೋಪಿ ಯಾರು ಎಂಬುದು ಅರಿಯದೇ ಎಷ್ಟು ಪ್ರಕರಣಗಳು ದಾಖಲಾಗಿವೆ ; ಆರೋಪಿಗಳನ್ನು ಹುಡುಕಲು ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರಗಳನ್ನು ಒದಗಿಸುವುದು)

(ಇ) ೨೦೨೩–೨೪ನೇ ಸಾಲಿನಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಷ್ಟು ಅಕ್ರಮ ಮರಳು ಜಪ್ತಿ ಮಾಡಲಾಗಿರುತ್ತದೆ ; ಅದರ ಅಂದಾಜು ಮೊತ್ತವೆಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಈ) ಅಕ್ರಮ ಮರಳು ಸಾಗಾಣಿಕೆಯಲ್ಲಿ ಪಾಲ್ಗೊಂಡವರ ವಿರುದ್ಧ ಕೈಗೊಂಡಿರುವ ಕ್ರಮಗಳು ಯಾವುವು ; (ವಿವರಗಳನ್ನು ಒದಗಿಸುವುದು)

(ಉ) ಅಕ್ರಮ ಮರಳು ಸಾಗಾಣಿಕೆಯನ್ನು ತಡೆಯಲು ಯಾವ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ? (ವಿವರ ಒದಗಿಸುವುದು)

## ಗೃಹ ನಿರ್ಮಾಣ ಸಂಘಗಳ ಅವ್ಯವಹಾರಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) –**

೭೭ (೯೦೧) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಹಕಾರ ಸಂಘದ ಕಾಯ್ದೆಯಡಿ ನೋಂದಣಿಯಾದ ಗೃಹ ನಿರ್ಮಾಣ ಸಂಘಗಳ ಸಂಖ್ಯೆ ಎಷ್ಟು ; ( ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಗೃಹ ನಿರ್ಮಾಣ ಸಂಘಗಳ ನೋಂದಣಿಗೆ ಹಾಗೂ ಕಾರ್ಯನಿರ್ವಹಣೆಗೆ ಇರುವ ನಿಯಮಗಳೇನು ; (ವಿವರ ಒದಗಿಸುವುದು)

(ಇ) ಗೃಹ ನಿರ್ಮಾಣ ಸಂಘಗಳಲ್ಲಿ ಎಷ್ಟು ಸಂಘಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ;

(ಈ) ಅವ್ಯವಹಾರ ಎಸಗಿದ ಗೃಹ ನಿರ್ಮಾಣ ಸಂಘ ಮತ್ತು ಸಂಬಂಧಿಸಿದ ವ್ಯಕ್ತಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಕೋಲಾರ ಜಿಲ್ಲೆಯ ಭಾವನಹಳ್ಳಿ ಕೈಗಾರಿಕಾ ಪ್ರದೇಶದ ಅವ್ಯವಹಾರದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೭೮ (೮೯೫) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಭಾವನಹಳ್ಳಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು ; (ಗ್ರಾಮವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು)

(ಆ) ಸದರಿ ಭೂಮಿಯಲ್ಲಿ ಭೂ ಸ್ವಾಧೀನಕ್ಕೆ ಪೂರ್ವದಲ್ಲಿ ನಡೆಸಿದ ಪ್ರಾಥಮಿಕ ಸರ್ವೆ, ಆರ್.ಟಿ.ಸಿ. ಮತ್ತು ಬೆಳೆ ಸಮೀಕ್ಷೆಯಲ್ಲಿ ದಾಖಲಾಗಿದ್ದ ಬೆಳೆಗಳು ಯಾವುವು ; ಮರಗಳ ಸಂಖ್ಯೆ ಎಷ್ಟು ; (ಗ್ರಾಮವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು) ಪ್ರಾಥಮಿಕ ಜಂಟಿ ಸಮೀಕ್ಷೆಯ ವರದಿಯನ್ನು ನೀಡುವುದು ;

(ಇ) ಪ್ರಾಥಮಿಕ ಸಮೀಕ್ಷೆಯಲ್ಲಿ ಆರ್.ಟಿ.ಸಿ.ಯಲ್ಲಿ ಗಿಡ–ಮರ ಇಲ್ಲದೆ ಇದ್ದರೂ ಸಹ ನಂತರ ಗಿಡ ನೆಟ್ಟು ಹಣ ಪಡೆದಿರುವ ಪ್ರಕರಣಗಳು ಎಷ್ಟು ; (ಗ್ರಾಮವಾರು, ಸರ್ವೆ ನಂಬರ್‌ವಾರು ವಿವರ ನೀಡುವುದು)

(ಈ) ಬೆಳೆ, ಗಿಡ ಮತ್ತು ಮರಗಳಿಗಾಗಿ ಎಷ್ಟು ರೈತರಿಗೆ ಹಣ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು) (ಗ್ರಾಮವಾರು, ಸರ್ವೆ ನಂಬರ್‌ವಾರು ಸಂಪೂರ್ಣ ವಿವರ ನೀಡುವುದು)

(ಉ) ಬೆಳೆ ಸಮೀಕ್ಷೆಯಲ್ಲಿ ಆರ್. ಟಿ. ಸಿ. ಯಲ್ಲಿ ಸಹ ಗಿಡ, ಮರಗಳ ಮಾಹಿತಿ ದಾಖಲಾಗಿದ್ದರೂ ಪರಿಹಾರ ನೀಡದಿರುವ ಪ್ರಕರಣಗಳೆಷ್ಟು ; ಸದರಿ ರೈತರಿಗೆ ಪರಿಹಾರ ನೀಡದಿರಲು ಕಾರಣಗಳೇನು ;

(ಊ) ಮಾನ್ಯ ಲೋಕಾಯುಕ್ತರು ಸರ್ಕಾರಕ್ಕೆ ಬರೆದಿರುವ ಪತ್ರದ ಪ್ರಕಾರ ಭಾವನಹಳ್ಳಿ ಕೈಗಾರಿಕಾ ಪ್ರದೇಶದ ಭೂಸ್ವಾಧೀನದಲ್ಲಿ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು ; ಈ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ/ಕೈಗೊಳ್ಳಲಿರುವ ಕ್ರಮವೇನು ;

(ಋ) ಸದರಿ ಅಕ್ರಮಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ವಿಚಾರಣೆಗೆ ಅನುಮತಿ ಕೋರಿ ಮಾನ್ಯ ಲೋಕಾಯುಕ್ತರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೇ ; ಬರೆದಿದ್ದಲ್ಲಿ , ಅನುಮತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಹೊಸ ಸಕ್ಕರೆ ಕಾರ್ಖಾನೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೭೯ (೯೨೩) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ ; ಅನುಮತಿ ನೀಡಲು ಇರುವ ಷರತ್ತುಗಳೇನು ; (ವಿವರ ನೀಡುವುದು)

(ಆ) ಬಾಗಲಕೋಟೆ ಜಿಲ್ಲೆಯ ರನ್ನ ಸಕ್ಕರೆ ಕಾರ್ಖಾನೆಯನ್ನು ಲೀಸ್‌ಗೆ ನೀಡಲಾಗಿದೆಯೇ ; ಯಾರಿಗೆ, ಯಾವಾಗ, ಯಾವ ಷರತ್ತಿಗೊಳಪಟ್ಟು ಯಾವ ರೀತಿಯಲ್ಲಿ ಲೀಸ್ ನೀಡಲಾಗಿದೆ ; ಬಿಡ್ ಕರೆದು ನೀಡಿದ್ದಲ್ಲಿ ಯಾವಾಗ ಬಿಡ್ ಕರೆಯಲಾಯಿತು ; ಯಾವ ಮಾರ್ಗಸೂಚಿಗಳ ಅನ್ವಯ ಬಿಡ್ ಕರೆಯಲಾಯಿತು ; (ವಿವರ ನೀಡುವುದು)

(ಇ) ಸದರಿ ಕಾರ್ಖಾನೆಯ ಸಂಪೂರ್ಣ ಸಾಲಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ; ಸಾಲ ಮರುಪಾವತಿಯ ಹೊಣೆಗಾರಿಕೆ ಸರ್ಕಾರದ್ದೋ ಅಥವಾ ಗುತ್ತಿಗೆದಾರರದ್ದೋ ; (ಸಮಗ್ರ ಮಾಹಿತಿ ನೀಡುವುದು)

(ಈ) ಸದರಿ ಕಂಪನಿಯು ಸಾಲವನ್ನು ಯಾವ ಕಾಲಮಿತಿಯಲ್ಲಿ ತೀರಿಸಲಾಗುವುದು ; ಹಾಗೂ ಯಾರು ತೀರಿಸುತ್ತಾರೆ ? (ಮಾಹಿತಿ ನೀಡುವುದು)

## ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸುವ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೦ (೮೭೨) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್ ಪಟ್ಟಣಕ್ಕೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.೪೪.೭೯ ಕೋಟಿಗಳ ಅನುದಾನವನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಿಗದಿಪಡಿಸಿದ ಅನುದಾನದಲ್ಲಿ ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು ;

(ಇ) ಬಾಕಿ ಉಳಿದಿರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಸದರಿ ಕುಡಿಯುವ ನೀರಿನ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲಾಗುವುದು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೧ (೮೦೮) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆ ಹುಮನಾಬಾದ್ ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಹಾಗೂ ರಾಜೇಶ್ವರಿ ಗ್ರಾಮ ಪಂಚಾಯತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಸರ್ಕಾರ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸದಿರಲು ಕಾರಣವೇನು ; (ಮಾಹಿತಿ ನೀಡುವುದು)

(ಇ) ನಗರಸಭೆಯಾಗಿ ಮತ್ತು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಯಾವಾಗ ಕ್ರಮಕೈಗೊಳ್ಳುವುದು ? (ಮಾಹಿತಿ ನೀಡುವುದು)

## ಕೃಷಿ ವಿವಿಗಳ ಮರು ಸಂಘಟಿಸುವ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೮೨ (೧೨೦೭) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯಗಳನ್ನು ಮರು ಸಂಘಟಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ರಾಜ್ಯ ಸರ್ಕಾರವು ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಕುರಿತಂತೆ ತಜ್ಞರ ಸಮಿತಿ ರಚಿಸಲಾಗಿದೆಯೇ ; ರಚಿಸಿದ್ದಲ್ಲಿ, ಯಾವ ಕಾರಣಕ್ಕಾಗಿ

ರಚಿಸಲಾಗಿದೆ ; ಸದರಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ ; ಸಲ್ಲಿಸಿದ್ದಲ್ಲಿ, ಪ್ರತಿ ಒದಗಿಸುವುದು ; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾಗಿದ್ದಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ ೨೦೨೫ರಂತೆ ಕೃಷಿ ವಿಜ್ಞಾನಗಳ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳ ಜೊತೆಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯುವನ್ನು ಮರು ಸಂಘಟನೆಯಾಗಲಿ ಅಥವಾ ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಕೃಷಿ ವಿಶ್ವವಿದ್ಯಾಲಯಗಳ ವಿಧೇಯಕದಲ್ಲಿ ಸೇರಿಸುವುದಿಲ್ಲವೆಂದು ಈ ಹಿಂದೆ ನಡೆದ ಸದನದಲ್ಲಿ ಹೇಳಿರುವುದು ಸರ್ಕಾರದ ಗಮನದಲ್ಲಿದೆಯೇ ; ಸರ್ಕಾರವೇ ಕೈಗೊಂಡ ತೀರ್ಮಾನಕ್ಕೆ ಇದು ವಿರುದ್ಧವಾಗುವುದಿಲ್ಲವೇ ; ಈ ಕುರಿತು ಸರ್ಕಾರ ತನ್ನ ಸ್ಪಷ್ಟ ನಿಲುವನ್ನು ತಿಳಿಸುವುದು ಮತ್ತು ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಈ) ಯಾವ ಕಾಲಮಿತಿಯಲ್ಲಿ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯಗಳನ್ನು ಕೃಷಿ ವಿಶ್ವವಿದ್ಯಾಲಯಗಳ ವಿಧೇಯಕ ಹಾಗೂ ವ್ಯಾಪ್ತಿಯಿಂದ ಪ್ರತ್ಯೇಕಿಸಿ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯಗಳ ಸ್ಥಾಪನೆ ಕುರಿತು ಸೂಕ್ತ ಕ್ರಮ ಸರ್ಕಾರ ಕೈಗೊಳ್ಳುವುದೇ ? (ವಿವರ ನೀಡುವುದು)

## ಕಲಬುರ್ಗಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩ (೮೦೦) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರ್ಗಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಜವಳಿ ಪಾರ್ಕ್ ಯಾವಾಗ ಪ್ರಾರಂಭಿಸಲಾಗುವುದು ; ಹಾಗೂ ಯಾವಾಗ ಮುಕ್ತಾಯಗೊಳಿಸಲಾಗುವುದು ;

(ಇ) ಜವಳಿ ಪಾರ್ಕ್ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು ; ಹಾಗೂ ಇದುವರೆಗೆ ಅದಕ್ಕೆ ಮೀಸಲಾಗಿಟ್ಟಿರುವ ಮೊತ್ತವೆಷ್ಟು ;

(ಈ) ಜವಳಿ ಪಾರ್ಕ್ ನಿರ್ಮಾಣಕ್ಕಾಗಿ ಜಾಗವನ್ನು ಮೀಸಲಾಗಿಟ್ಟಿದೆಯೇ ; ಇಟ್ಟಿದ್ದರೆ ಎಷ್ಟು ಜಾಗವನ್ನು ಮೀಸಲಾಗಿಟ್ಟಿದೆ ;

(ಉ) ಜವಳಿ ಪಾರ್ಕ್ ನಿರ್ಮಾಣಕ್ಕೆ ಕೇಂದ್ರದಿಂದ ದೊರೆಯಬೇಕಾದ ಸೌಲಭ್ಯಗಳಿಗಾಗಿ ಹಾಗೂ ಅನುಮೋದನೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನಗರ ಯೋಜನೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರ ಸ್ಥಳ ನಿಯೋಜನೆ ಕುರಿತು

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪ (೯೧೬) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಟಿ.ಸಿ.ಪಿ ಕಾಯ್ದೆ ೧೯೬೧ರ ಕಲಂ ೪(ಕೆ) ರಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗೆ ನಗರದ ಯೋಜನೆಯಲ್ಲಿ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆ ಇರದ ಅಧಿಕಾರಿಯನ್ನು ಸ್ಥಳ ನಿಯುಕ್ತಿಗೊಳಿಸಬೇಕಾಗಿದ್ದು ನಿಜವೇ ;

(ಆ) ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ ೨೬ ನಯೋಸೇ ೨೦೨೨, ದಿನಾಂಕ ೧೧.೦೪.೨೦೨೨ ರಲ್ಲಿ ಮುಂಬಡ್ತಿ ನೀಡಿರುವ ಕೆಲವು ಅಧಿಕಾರಿಗಳನ್ನು ಕೆ.ಟಿ.ಸಿ.ಪಿ ಕಾಯ್ದೆ ೧೯೬೧ರ ಕಲಂ ೪(ಐ), (ಕೆ) ರಂತೆ ನಿರ್ದಿಷ್ಟಪಡಿಸಿರುವ ಹುದ್ದೆಗಳಿಗೆ ನಿಯೋಜಿಸಲು ಸ್ಥಳನಿಯುಕ್ತಿಗೊಳಿಸಲು ಅವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸಹಾಯಕ ನಿರ್ದೇಶಕರ ದರ್ಜೆಗಿಂತ ಕೆಳಹಂತದ ಅಧಿಕಾರಿಗಳಾದ ನಗರ ಯೋಜಕರುಗಳನ್ನು ಪ್ರಭಾರದಲ್ಲಿರಿಸಿರುವುದು ಹಾಗೂ ನಗರ ಯೋಜನೆಯಲ್ಲಿ ಸ್ನಾತಕ ಪದವಿ ಅಥವಾ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿಲ್ಲದ ಅಧಿಕಾರಿಗಳನ್ನು "ತಾತ್ಕಾಲಿಕ ವ್ಯವಸ್ಥೆ" ಎಂಬ ಷರತ್ತು ವಿಧಿಸಿ ಅರ್ಹ ಅಧಿಕಾರಿಗಳು ಲಭ್ಯವಿದ್ಯಾಗಲೂ ಸಹ ನಿಯಮಬಾಹಿರ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ , ಈ ರೀತಿಯಾಗಿ ಕಾಯ್ದೆ ಉಲ್ಲಂಘಿಸಿ ವರ್ಗಾವಣೆ/ಸ್ಥಳ ನಿಯುಕ್ತಿ/ಪ್ರಭಾರ ವ್ಯವಸ್ಥೆ ಕಲ್ಪಿಸಲಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು ; ಹಾಗೂ ಈ ರೀತಿಯ ಕಾನೂನುಬಾಹಿರ ಕ್ರಮಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು ? (ಸಂಪೂರ್ಣ ವಿವರ ನೀಡುವುದು)

## ಮಳೆಯಿಂದ ಹಾನಿಯಾಗಿರುವ ತೋಟಗಾರಿಕೆ ಬೆಳೆಗಳಿಗೆ ಪರಿಹಾರ ನೀಡಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೮೫ (೮೧೬) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸುರಿದ ಬೇಸಿಗೆ ಹಾಗೂ ಮುಂಗಾರು ಮಳೆಯಿಂದಾಗಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ಹಾನಿಯಾಗಿದೆ ; ಯಾವ ಯಾವ ಬೆಳೆ ಹಾನಿಯಾಗಿದೆ ; ಆಗಿರುವ ಬೆಳೆ ಹಾನಿ ಮೊತ್ತ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಬೆಳೆ ಹಾನಿಯಾದ ರೈತರಿಗೆ ಪರಿಹಾರ ನೀಡಲಾಗಿದೆಯೇ ; ಹಾಗಿದ್ದರೇ, ಯಾವ ಬೆಳೆಗೆ ಎಷ್ಟು ಪರಿಹಾರ ಘೋಷಣೆ ಮಾಡಲಾಗಿದೆ ; ಈವರೆಗೆ

ಎಷ್ಟು ಪರಿಹಾರ ಹಣ ಬಿಡುಗಡೆಯಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಪರಿಹಾರ ಮೊತ್ತ ಬಿಡುಗಡೆಯಾಗದಿದ್ದಲ್ಲಿ , ರೈತರಿಗೆ ಯಾವ ಕಾಲಮಿತಿಯೊಳಗೆ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗುವುದು ; (ಸಂಪೂರ್ಣ ವಿವರ ಒದಗಿಸುವುದು)

(ಈ) ಎನ್.ಡಿ.ಆರ್.ಎಫ್ ಮಾರ್ಗಸೂಚಿಯಿಂದಾಗಿ ರೈತರಿಗೆ ಯಾವ ರೀತಿ ತೊಂದರೆಯಾಗಿದೆ ; ಮಾರ್ಗಸೂಚಿ ಮಾನದಂಡ ಬದಲಾವಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಅಮೃತ್–೧ ಕಾಮಗಾರಿಯ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬ (೮೬೮) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬ ರಿಂದ ೨೦೧೭ ರಲ್ಲಿ ಅಮೃತ–೧ ಟೆಂಡರ್ ಕರೆದ ಕಾಮಗಾರಿಗಳು ಮತ್ತು ಆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೧೬–೧೭ ರಲ್ಲಿ ಕರೆದ ಅಮೃತ್–೧ ಯೋಜನೆಯ ಟೆಂಡರ್‌ನಲ್ಲಿ ಸಂಪೂರ್ಣವಾದ ಕಾಮಗಾರಿ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಅಮೃತ್–೧ ಯೋಜನೆಯ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಅಮೃತ್–೧ ಯೋಜನೆಗೆ ರಾಜ್ಯ ಪುರಸ್ಕೃತ ಹಾಗೂ ಕೇಂದ್ರ ಪುರಸ್ಕೃತ ಮತ್ತು ಯು.ಎಲ್.ಬಿ.ಗಳ ಅನುದಾನಗಳ ಪಾಲು ಎಷ್ಟು ಮತ್ತು ಯು.ಎಲ್.ಬಿ ಇಂದ ಬಿಡುಗಡೆಯಾದ ಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಅಮೃತ್–೧ ಯೋಜನೆಯ ಕಾಮಗಾರಿಯನ್ನು ಪರಿಪೂರ್ಣಗೊಳಿಸಲು ಬೇಕಾಗುವ ಅನುದಾನ ಮತ್ತು ಸಮಯ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಊ) ಯು.ಎಲ್.ಬಿ ಪಾಲುದಾರಿಕೆಯಲ್ಲಿ ಅನುದಾನ ಬಿಡುಗಡೆಯಾಗದೆ ಕಾಮಗಾರಿ ವಿಳಂಬವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದ್ದು ಯು.ಎಲ್.ಬಿ.ಯಲ್ಲಿ ಅನುದಾನವಿಲ್ಲದ ಕಾರಣ, ಯು.ಎಲ್.ಬಿ ಪಾಲುದಾರಿಕೆಗೆ ಬೇರೆ ಅನುದಾನ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ಚಿಂತಿಸಿದೆಯೇ ; ಇದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಕೇಂದ್ರ ಯೋಜನೆ ತಲುಪುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ರಾಜ್ಯ ಸರ್ಕಾರದಿಂದ ಅಮೃತ್–೨ ಯೋಜನೆಗೆ ಟೆಂಡರ್ ಕರೆದ ಕಾಮಗಾರಿಗಳು ಎಷ್ಟು ; ಬಿಡುಗಡೆಯಾದ ಅನುದಾನ ಎಷ್ಟು ; ಕಾಮಗಾರಿ ಯಾವ ಹಂತದಲ್ಲಿ ಇದೆ ; ಎಷ್ಟು ಕಾಮಗಾರಿ ಪ್ರಗತಿಯಲ್ಲಿ ಇದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಲ್ಯಾಟರೈಟ್ ಗಣಿ ಗುತ್ತಿಗೆಗಳ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭ (೭೯೮) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಲ್ಯಾಟರೈಟ್ ಗಣಿಗೆ ಸಂಬಂಧಿಸಿದಂತೆ ನೀಡಲಾದ ಕಲ್ಲು ಗಣಿ ಗುತ್ತಿಗೆಗಳೆಷ್ಟು ; (ಪಟ್ಟಿಯನ್ನು ಒದಗಿಸುವುದು)

(ಆ) ಕಾರ್ಯನಿರ್ವಹಿಸುತ್ತಿರುವ ಈ ಎಲ್ಲಾ ಕಲ್ಲು ಗಣಿ ಗುತ್ತಿಗೆಗಳಲ್ಲಿ ಪರಿಸರ ಸಂರಕ್ಷಣಾ ಯೋಜನೆಯನ್ನು ಸಲ್ಲಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆಯೇ ;

(ಇ) ಏಪ್ರಿಲ್–೨೦೨೦ ರಿಂದ ಇಲ್ಲಿಯವರೆಗೆ ರದ್ದಾಗಿರುವ ದಕ್ಷಿಣ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿನ ಲ್ಯಾಟ್‌ರೈಟ್ ಗಣಿಗೆ ಸಂಬಂಧಿಸಿದಂತೆ ನೀಡಲಾದ ಕಲ್ಲು ಗಣಿ ಗುತ್ತಿಗೆಗಳೆಷ್ಟು ; (ಪಟ್ಟಿಯನ್ನು ಒದಗಿಸುವುದು)

(ಈ) ರದ್ದಾಗಿರುವ ಈ ಎಲ್ಲಾ ಕಲ್ಲು ಗಣಿ ಗುತ್ತಿಗೆಗಳಲ್ಲಿ ಗಣಿ ಸಮಾಪನಾ ಯೋಜನೆಯನ್ನು ಜಾರಿಗೆ ತರಲಾಗಿದೆಯೇ ; ಹಾಗಿದ್ದಲ್ಲಿ, ರದ್ದು ಮಾಡಿರುವ ಕಲ್ಲು ಗಣಿ ಗುತ್ತಿಗೆಗಳಿಗೆ ಪರಿಸರ ಸಂರಕ್ಷಣಾ ಯೋಜನೆ ಮತ್ತು ಗಣಿ ಸಮಾಪನಾ ಯೋಜನೆಯ ಎಲ್ಲಾ ಷರತ್ತುಗಳನ್ನು ಪಾಲಿಸಲಾಗುತ್ತಿದೆಯೇ ?

## ಮೈಷುಗರ್ ಕಾರ್ಖಾನೆಯಲ್ಲಿ ಎಥೆನಾಲ್ ಘಟಕ ಸ್ಥಾಪನೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೮೮ (೮೪೬) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೫ರ ಆಯವ್ಯಯದಲ್ಲಿ ಘೋಷಿಸಿದಂತೆ, 'ಮಂಡ್ಯದ ಮೈಷುಗರ್ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣ' ಮಾಡಲು ಸ್ಥಳ ಗುರುತಿಸಲಾಗಿದೆಯೇ ; ವಿಸ್ತೀರ್ಣ ಹಾಗೂ ಯೋಜನಾ ಅಂದಾಜು ವೆಚ್ಚ ಎಷ್ಟು ; (ವಿವರ ನೀಡುವುದು)

(ಆ) ಮೈಷುಗರ್ ಕಾರ್ಖಾನೆಯಲ್ಲಿ 'ಎಥೆನಾಲ್ ಘಟಕ' ಸ್ಥಾಪನೆ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ;

(ಇ) ಮೈಷುಗರ್ ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ ಕಾರ್ಯಾರಂಭಗೊಂಡ ನಂತರದಿಂದ ಈವರೆವಿಗೂ ಉತ್ಪಾದಿಸಲಾದ ವಿದ್ಯುತ್ ಪ್ರಮಾಣ ಎಷ್ಟು ; ಇದರಲ್ಲಿ ಮಾರಾಟ ಮಾಡಲಾದ ವಿದ್ಯುತ್ ಪ್ರಮಾಣ ಹಾಗೂ ಗಳಿಸಿದ ಲಾಭ ಎಷ್ಟು ; (ವರ್ಷವಾರು ವಿವರ ನೀಡುವುದು)

(ಈ) ಮೈಷುಗರ್ ಒಡೆತನದಲ್ಲಿ ಎಷ್ಟು ಎಕರೆ ಭೂಮಿ ಇದೆ ; ಈ ಪೈಕಿ ಎಷ್ಟು ಎಕರೆ ಭೂಮಿ ಒತ್ತುವರಿಯಾಗಿದೆ ; ಯಾವ್ಯಾವ ಸರ್ವೆ ನಂಬರುಗಳಲ್ಲಿ ಭೂಮಿ ಒತ್ತುವರಿಯಾಗಿದೆ ; ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು ;

(ಉ) ಡಿಸ್ಟಿಲರಿ ಘಟಕವನ್ನು ಮತ್ತೆ ಆರಂಭಿಸಲು ಉದ್ದೇಶಿಸಲಾಗಿದೆಯೇ ?

## ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಕುರಿತು

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೯ (೧೨೩೭) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಒಟ್ಟು "ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳು" ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಯಂ/ಗುತ್ತಿಗೆ ನೌಕರರ ಸಂಖ್ಯೆ ಎಷ್ಟು ; (ಹುದ್ದೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದಾದರೂ ಒಬ್ಬ ನೌಕರರಿಗೆ ಎರಡು ಹುದ್ದೆಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ೦೨ ಹುದ್ದೆಗಳನ್ನು ಒಬ್ಬರಿಗೆ ನೀಡಿರುವುದು ಮಾಹಿತಿ ಮತ್ತು ಸರ್ಕಾರದ ಕ್ರಮವನ್ನು ವಿವರವಾಗಿ ವರದಿಯೊಂದಿಗೆ ನೀಡುವುದು ;

(ಈ) ಒಬ್ಬರಿಗೆ ಎರಡು ಹುದ್ದೆಗಳನ್ನು ನೀಡಲು ಕಾನೂನಿನಲ್ಲಿ ಅವಕಾಶವಿದೆಯೇ ; ಇದ್ದಲ್ಲಿ, ಯಾವ ಕಾನೂನಿನ ಅಡಿಯಲ್ಲಿ ಎಂಬುದರ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಉ) ಕಾನೂನು ಉಲ್ಲಂಘನೆ ಮಾಡಿರುವುದು ಕಂಡುಬಂದರೆ ಸಂಬಂಧಪಟ್ಟವರ ಮೇಲೆ ಸರ್ಕಾರವು ಯಾವ ಕಾಲಮಿತಿಯಲ್ಲಿ ಕ್ರಮಕೈಗೊಳ್ಳುವುದು ? (ಸ್ಪಷ್ಟವಾಗಿ ತಿಳಿಸುವುದು)

## ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೯೦ (೮೨೬) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯು ಅಸಮರ್ಪಕ ಜೋಡಣೆಯಿಂದ ಸೇರಿದಂತೆ ಬಾವಿಗಳ ಕುಡಿಯುವ ನೀರು, ಮಾಲಿನ್ಯ ಉಂಟಾಗಿದ್ದು, ಇದನ್ನು ತಡೆಯಲು ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಮಂಗಳೂರು ಮಹಾನಗರ ಪಾಲಿಕೆಗೆ ವಿಶೇಷ ಅನುದಾನ ನೀಡಲು ಸರ್ಕಾರದ ಮುಂದೆ ಯೋಜನೆ ಇದೆಯೇ ; (ವಿವರ ನೀಡುವುದು)

(ಆ) ಪ್ರಸ್ತುತ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಇ) ಈ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು ಶುದ್ಧೀಕರಿಸದೆ ವಿತರಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಒಳಚರಂಡಿ ನೀರು ನೇತ್ರಾವತಿ, ನಂದಿನಿ ಕಂಡೇವು ನದಿಗಳಿಗೆ ಹರಿದು ಮಾಲಿನ್ಯಗೊಂಡಿರುವುದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಉ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಲ ಶ್ರೀ ಯೋಜನೆ ಜಾರಿಗೆ ತರಲು ಎಷ್ಟು ಸಮಯ ತಗಲುವುದು ; ಈ ಯೋಜನೆ ಯಾವ ಹಂತದಲ್ಲಿದೆ ; (ವಿವರ ನೀಡುವದು)

(ಊ) ಕುಡಿಯುವ ನೀರು ಸರಬರಾಜಿನಿಂದ ನಗರಪಾಲಿಕೆಗೆ ಬರುವ ಆದಾಯ ಎಷ್ಟು ; ತಗಲುವ ವೆಚ್ಚ ಎಷ್ಟು ; ಎಷ್ಟು ಮನೆಗಳಿಗೆ ಉಚಿತವಾಗಿ ನೀರನ್ನು ಪೂರೈಸಲಾಗುತ್ತಿದೆ ? (ವಿವರ ನೀಡುವದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

---

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – 263 ಪ್ರತಿಗಳು – 600 (ಪಿ6)

**List of Questions**
**for Oral Answers**

**Total No. of**
**Questions - 15**

# LIST - 06

# KARNATAKA LEGISLATIVE COUNCIL

## ONE HUNDRED AND FIFTY SIXTH SESSION

## Tuesday, the 19th August, 2025

---

**GROUP - II**

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

---

**ILLEGAL SAND TRANSPORTATION IN KOPPAL DISTRICT**

**Smt. Hemalatha Nayak (Elected by Legislative Assembly) -**

76 (907) Will the Minister for Mines and Geology and Horticulture be pleased to state :-

a) the number of illegal sand transportation cases that have been reported in Koppal district from the year 2023-24 till date ; out of which, the number of people against to whom the cases have been filed in the police station ; (details be furnished)

b) the number of cases that have been filed without knowing the accused in illegal sand transportation ; the step that has been taken to trace out the accused ; (details be furnished)

c) the quantum of illegal sand that has been seized in Koppal district from the year 2023-24 till date ; the estimated amount thereof ; (talukwise information be furnished)

d) the particulars of actions taken against the persons who have been involved in illegal sand transportation ; (details be furnished)

e) the particulars of precautionary measures that have been taken to prevent illegal sand transportation ? (details be furnished)

**IRREGULARITIES OF HOUSING SOCIETIES**

**Sri Ramojigowda (Graduates' Constituency) -**

77 (901) Will the Minister for Co-operation be pleased to state:-

a) the number of housing societies that have been registered under Co-operative Societies Act in the State ; (districtwise information be furnished)

b) the prevailing rules for registration and functioning of Housing societies ; (details be furnished)

c) out of the housing societies, number of the societies in which the irregularity has come to the notice of the Government ;

d) the action taken by the Government against the housing society and the concerned persons who have involved in the irregularity ?

## IRREGULARITY OF BAVANAHALLI INDUSTRIAL AREA OF KOLAR DISTRICT

**Sri Chidanand M. Gowda (Graduates' Constituency) -**

78 (895) Will the Minister for Large and Medium Scale Industries and Infrastructure Development be pleased to state:-

a) the extent of land that has been acquired by the Industrial area Development Board for Bavanahalli industrial area of Malur taluk of Kolar district ; (Villagewise, survey numberwise details be furnished)

b) the particulars of crops that have been recorded in the preliminary survey, R.T.C and crop survey that has been carried out prior to land acquisition in the said land ; the number of trees thereof ; (villagewise, survey numberwise details be furnished) the report of preliminary joint survey be furnished ;

c) the number of cases in which the amount has been received by planting plants eventhough there were no plants or trees in the R.T.C's in preliminary survey ; (villagewise, survey numberwise details be furnished)

d) the number of farmers to whom the amount that has been provided for the crops, plants and trees ; (complete details be furnished) (villagewise, survey numberwise complete details be furnished)

e) the number of cases in which the compensation has not been provided, eventhough the information of plants and trees have been recorded even in R.T.C's in the crop survey ; the reasons for not providing the compensation for the said farmers ;

f) the loss that has been caused to the exchequer of the Government in the land acquisition of Bavanahalli Industrial Area as per the letter written by the

Hon'ble Lokayukta to the Government ; the action that has been taken/to be taken by the Government against the officers who are responsible for this loss ;

g) whether the letter has been written by the Hon'ble Lokayukta to the Government seeking permission for the enquiry of officers/staff who are responsible for the said irregularity ; if so, the steps taken by the Government to grant the permission ?

**REGARDING NEW SUGAR FACTORY**

**Sri N. Ravikumar (Elected by Legislative Assembly) -**

79 (923) Will the Minister for Textiles, Sugarcane Development and Sugar and Agricultural Marketing be pleased to state:-

a) number of sugar factories that have obtained approval for the commencement in the last three years ; the prevailing conditions for the same ; (details be furnished)

b) whether the Ranna Sugar Factory in Bagalkot district has been given on lease ; the person to whom, the date on which and subject to the condition and the manner in which the same has been given on lease ; if it has been given by inviting bid, the date on which the bid has been invited ; the guidelines under which the bid has been invited ; (details be furnished)

c) the persons who have been made sole responsible for the entire loan of the said factory; whether the Government or contractors are responsible for loan reimbursement ; (complete information be furnished)

d) the timelimit within which the loan of said company would be paid ; and the person who will pay the same ? (information be furnished)

## IMPLEMENTATION OF DRINKING WATER PROJECT TO MUDGAL TOWN

**Sri Sharanagouda Bayyapur (Local Authorities Constituency) -**

80 (872) Will the Minister for Urban Development and Town Planning be pleased to state:-

a) whether it has come to the notice of the Government that grant of Rs.44.79 crores has been earmaked by K.U.I.D.F.C for drinking water supply project to Mudgal town of Lingasugur taluk in Raichur district ;

b) out of the earmarked grant, the grant that has been released so far and the outstanding grant thereof ;

c) the date on which the outstanding grant would be released ; (complete information be furnished)

d) the timelimit within which the said drinking water project would be completed ? (complete information be furnished)

## UPGRADATION OF CITY MUNICIPAL COUNCIL AND TOWN MUNICIPAL COUNCIL

**Sri Bhimrao Basavaraj Patil (Local Authorities Constituency) -**

81 (808) Will the Minister for Municipalities and Haj be pleased to state:-

a) whether it has come to the notice of the Government regarding the proposal for upgradation of Humnabad Town Municipal Council of Bidar district into City Municipal Council and Rajeshwari Gram Panchayat into Town Municipal Council; if so, the steps taken by the Government in this regard ;

b) the reasons for non upgradation of the same by the Government so far ; (information be furnished)

c) the date on which the step would be taken by the Government for the upgradation of the said City Municipal Council and Town Municipal Council ? (information be furnished)

**REORGANISATION OF AGRICULTURAL UNIVERSITIES**

**Sri Nirani Hanamant Rudrappa (Graduates' Constituency) -**

82 (1207) Will the Minister for Mines and Geology and Horticulture be pleased to state:-

a) the steps taken by the Government for the reorganisation of the Agricultural Universities in the State ; (details be furnished)

b) whether an expert committee has been constituted by the State Government with regard to establishment of integrated agricultural universities ; if so, the reason for which it has been constituted ; whether the said committee has submitted its report to the Government ; if so, the copy of the same be furnished ; (complete information in this regard be furnished)

c) if so, whether it is in the notice of the Government that it has been stated in the previous session that either the reorganisation of the University of Horticultural Sciences alongwith the Integrated Agricultural Universities of Agricultural Sciences as per the University of Agricultural Sciences (Amendment) Bill, 2025 or the Horticultural Universities would not be included in the Agricultural Universities Bill ; whether it is against to the decision taken by the Government itself ; the clear stand of the Government in this regard and the complete information in this regard be furnished ;

d) the timelimit within which an appropriate action would be taken by the Government with regard to establishment of Horticulture Science Universities by bifurcating said University from the limit of Universities of Agricultural Sciences bill ? (details be furnished)

**CONSTRUCTION OF TEXTILE PARK IN KALABURAGI**

**Sri Jagadev Guttedar (Elected by Legislative Assembly) -**

83 (800) Will the Minister for Textiles, Sugarcane Development and Sugar and Agricultural Marketing be pleased to state:-

a) whether the proposal is before the Government to construct the Textile Park in Kalaburagi district ;

b) the date on which the textile park would be commenced and completed ;

c) the expenditure to be incurred to construct the same and the amount that has been earmarked for the same so far ;

d) whether the land has been reserved for the construction of Textile Park ; if so, the extent of land that has been reserved ;

e) the steps taken by the Government for the facilities and approval to be availed by the Central Government to construct the same ?

**PLACEMENT FOR ASSISTANT DIRECTORS IN TOWN PLANNING DEPARTMENT**

**Sri Sharavana T.A. (Elected by Legislative Assembly) -**

84 (916) Will the Minister for Urban Development and Town Planning be pleased to state:-

a) whether it is true that the placement would be assigned for the Officer not less than the cadre of Assistant Director who have obtained graduation or post graduation degree in Town Planning for the Office of Assistant Director of Town and Country Planning as per section 4(k) of K.T.C.P Act, 1961 ;

b) whether it has come to the notice of the Government that there is no provision for the deployment or placement for the specified posts as per section 4(I), (K) of K.T.C.P Act, 1961 of some Officers who have been promoted vide Government notification NO.UDD 26 TPS 2022, dated: 11.04.2022 ;

c) whether it has come to the notice of the Government that the Town Planners which is the lower Cadre of Assistant Directors are kept in charge to Assistant Directors and transfer has been carried out overlooking the rules eventhough eligible officers have been availed by imposing the condition 'provisionary' for the Officers who have not obtained graduation or post graduation degree in Town Planning in various districts of the State ;

d) if so, the actions that has been taken against the Officers to whom the facility like transfer /placement/ incharge has been provided by violating the Act in this manner; and the particulars of steps that have been taken to control such kinds of illegal measures ? (complete details be furnished)

**COMPENSATION TO HORTICULTURAL CROPS**

**Sri C.T. Ravi (Elected by Legislative Assembly) -**

85 (816) Will the Minister for Mines and Geology and Horticulture be pleased to state:-

a) the extent of hectare of horticultural crops that have been damaged due to the summer and monsoon rain poured in the State ; the particulars of crops that have been damaged ; the amount of crop that has been damaged ; (districtwise information be furnished)

b) whether the compensation has been provided for farmers to whom the crops that have been damaged ; if so, the amount of compensation that has been declared for various crops ; the amount of compensation that has been released so far ; (districtwise details be furnished)

c) if not, the timelimit within which the compensation amount would be released to farmers ; (complete details be furnished)

d) the manner in which the trouble has been caused to farmers from the guidelines of N.D.R.F ; the step taken by the Government to modify the guidelines criteria ?

**REGARDING WORK OF AMRUT-1**

**Sri Sunil Vallyapur (Elected by Legislative Assembly) -**

86 (868) Will the Minister for Municipalities and Haj be pleased to state:-

a) the number of works for which the tender has been invited in AMRUT-1 from 2016 to 2017 and the grant that has been released for the said works ; (districtwise complete information be furnished)

b) the details of the work that has been completed and under progress in the tender of AMRUT-1 scheme that has been invited in 2016-17 ; (districtwise complete information be furnished)

c) whether it has come to the notice of the Government that the work of AMRUT-1 scheme is being carried out in a slow phase manner ; if so, the step taken by the

Government in this regard ; (complete information be furnished)

d) the share of the State sponsored, Centrally sponsored and ULB's grants for AMRUT-1 scheme and the grant that has been released by ULB's ; (complete information be furnished)

e) the grant and time to be required for the completion of the work of AMRUT-1 scheme ; (complete information be furnished)

f) whether it has come to the notice of the Government that the work is being delayed due to non releasing of the grant in the collaboration of ULB's ; the Central Government has released the grant, due to non-availability of grant in ULB's whether the State Government has contemplated to release other grant for the collaboration of ULB's ; whether it has come to the notice of the Government that the delay is being caused to reaching the drinking water project of Central Government for the public thereof ;

g) the number of tender works that have been invited by the State Government for AMRUT-2 scheme ; the grant that has been released ; the present stage of the work ; the number of works that are under progress ? (complete information be furnished)

## LATERITE MINING LEASES IN BELAGAVI AND DAKSHINA KANNADA DISTRICTS

**Sri Y.M. Satish (Local Authorities Constituency) -**

87 (798) Will the Minister for Mines and Geology and Horticulture be pleased to state:-

a) the number of quarry leases that have been granted with regard to laterite mines which are operating

currently in Dakshina Kannada and Belagavi districts ; (list be furnished)

b) whether the same has been implemented by submitting the environment protection plan in all these operating quarry leases ;

c) the number of quarry leases that have been granted with regard to laterite mines in Dakshina Kannada and Belagavi districts have been lapsed from April-2020 till date ; (list be furnished)

d) whether the mine closure plan has been implemented in all these cancelled quarry leases ; if so, whether all conditions of the environment protection plan and mine closure plan are being complied with the lapsed quarry leases ?

**ESTABLISHMENT OF ETHENOL UNIT IN MYSUGAR FACTORY**

**Sri Madhu G.Madegowda (Graduates' Constituency) -**

88 (846) Will the Minister for Textiles, Sugarcane Development and Sugar and Agricultural Marketing be pleased to state:-

a) whether the land has been identified to construct the new sugar factory in the premises of Mysugar factory in Mandya as declared in the budget of 2024-25 ; the extent of land and estimated cost of the project ; (details be furnished)

b) whether the approval has been accorded by the Government for the proposal which was under verification in the Government level with regard to establishment of 'Ethanol unit' in Mysugar factory ; if not, the reasons for the delay ;

c) the quantum of electricity that has been generated after the commencement of electricity unit in mysugar factory so far ; out of which, the quantum of electricity that has been sold and the profit earned from it ; (yearwise details be furnished)

d) the extent of acre of land which is in the possession of mysugar factory ; out of which, the extent of acre of land that has been encroached ; the particulars of survey numbers in which land has been encroached ; the steps taken to evict the encroachment ;

e) whether it has intended to recommence the distillery unit ?

## REGARDING WOMEN MILK PRODUCERS CO-OPERATIVE SOCIETIES

**Sri Suraj Revanna (Local Authorities Constituency) -**

89 (1237) Will the Minister for Co-operation be pleased to state:-

a) the total number of "Women Milk Producers Co-Operative Societies" in Channarayapatna taluk of Hassan district ; (complete information be furnished)

b) the number of permanent/contractual employees who are working currently in the said Women Milk Producers Co-Operative Societies ; (postwise complete information be furnished)

c) whether it has come to the notice of the Government that two posts have been provided to any one employee who is working in the said Women Milk Producers Co-Operative Society ; if so, the information of the reason for which two posts have been provided to single employee and the details of action which has been taken by the Government in this regard alongwith report be furnished ;

d) whether there is a provision in the Law to provide two posts for one person ; if so, the complete information with regard to the particulars of Law under which it has been provided be furnished ;

e) if violation of the Law is found, the timelimit within which the action would be taken by the Government against concerned persons ? (clear information be furnished)

**SEWERAGE SYSTEM IN THE LIMIT OF MANGALURU CITY CORPORATION**

**Sri Ivan D'Souza (Elected by Legislative Assembly) -**

90 (826) Will the Minister for Urban Development and Town Planning be pleased to state:-

a) since the drinking water of wells has been polluted due to improper connection of sewerage system in the limit of Mangaluru City Corporation, whether the plan is before the Government to provide the special grant to Mangaluru City Corporation to setright the sewerage system and prevent the same ; (details be furnished)

b) the particulars of works that have been taken up currently in the limit of Mangaluru City Corporation to setright the sewerage system ; (details be furnished)

c) whether it has come to the notice of the Government that the drinking water is being supplied without purification in the limit of this City Corporation ;

d) the step taken by the Government to prevent the sewerage water flowing into the Netravathi, Nandini and Kandevu rivers ;

e) the time to be required for the implementation of Jal Shree Project in the limit of Mangaluru City Corporation ; the present stage of this project ; (details be furnished)

f) the revenue that would be accrued to the exchequer of the City Corporation from the drinking water supply ; the cost to be incurred for the same; the number of houses for which the water is being supplied in free of cost ? (details be furnished)

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-263/P5